ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1652 (1907)
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	23-03-2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
1.	ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳ ವಿವರ ಒದಗಿಸುವುದು;	ರಾಜ್ಯದಲ್ಲಿ ಪ್ರಸ್ತುತ 59 ನಗರಸಭೆ, 121 ಪುರಸಭೆ, 109 ಪಟ್ಟಣ ಪಂಚಾಯಿತಿಗಳು ಇರುತ್ತವೆ. ವಿವರವನ್ನು **ಅನುಬಂಧ-01** ರಲ್ಲಿ ಒದಗಿಸಿದೆ.
2.	ಕಳೆದ ಎರಡು ವರ್ಷಗಳಿಂದ ವಿಜಯಪುರ ಜಿಲ್ಲೆಯಲ್ಲಿ ನೀಡಿರುವ ಅನುದಾನ ಎಷ್ಟು;	ಕಳೆದ 2 ವರ್ಷಗಳಲ್ಲಿ ವಿಜಯಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ 14ನೇ ಹಣಕಾಸು ಆಯೋಗದ ಅನುದಾನ ಮತ್ತು 15ನೇ ಹಣಕಾಸು ಆಯೋಗದಡಿ ಬಿಡುಗಡೆಗೊಳಿಸಿರುವ ಅನುದಾನದ ವಿವರಗಳನ್ನು **ಅನುಬಂಧ-02** ರಲ್ಲಿ ಒದಗಿಸಿದೆ. **ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ** 1 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ವಿಜಯಪುರ ಮಹಾನಗರಪಾಲಿಕೆಯು ಆಯ್ಕೆಯಾಗಿದ್ದು, ಸದರಿ ಯೋಜನೆಯಡಿ ವಿಜಯಪುರ ಮಹಾನಗರಪಾಲಿಕೆಗೆ 5 ವರ್ಷಗಳ ಅವಧಿಗೆ ಒಟ್ಟು ರೂ.181.98 ಕೋಟಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಈತನಕ ಒಟ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ರೂ.131.8 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಯ ವಂತಿಕೆಯಾಗಿ ವಿಜಯಪುರ ಮಹಾನಗರಪಾಲಿಕೆಯ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ.26.63 ಕೋಟಿಗಳನ್ನು ಒದಗಿಸಿದೆ. ವಿವರಗಳನ್ನು **ಅನುಬಂಧ-03** ರಲ್ಲಿ ಒದಗಿಸಿದೆ. ಕಳೆದ ಎರಡು ವರ್ಷಗಳಿಂದ ವಿಜಯಪುರ ಜಿಲ್ಲೆಯಲ್ಲಿ ಬರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಗೆ ನೀಡಿರುವ ಅನುದಾನದ ವಿವರಗಳನ್ನು **ಅನುಬಂಧ-04** ರಲ್ಲಿ ಹಾಗೂ ವಿಜಯಪುರ ಮಹಾನಗರಪಾಲಿಕೆಗೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಗೆ ನೀಡಿರುವ ಅನುದಾನದ ವಿವರಗಳನ್ನು **ಅನುಬಂಧ-05** ರಲ್ಲಿ ಒದಗಿಸಿದೆ. **ಸ್ವಚ್ಛ ಭಾರತ ಯೋಜನೆಯ** ಲೆಕ್ಕ ಶೀರ್ಷಿಕೆ 2217-80-800-0-35 ಅಡಿಯಲ್ಲಿ ಕಳೆದ 2 ವರ್ಷಗಳಲ್ಲಿ ವಿಜಯಪುರ ಜಿಲ್ಲೆಗೆ ಕೆಳಕಂಡಂತೆ ಅನುದಾನವನ್ನು ಬಿಡುಗಡೆಮಾಡಲಾಗಿರುತ್ತದೆ. (ರೂ ಲಕ್ಷಗಳಲ್ಲಿ)

ವರ್ಷ	ಬಿಡುಗಡೆಯಾದ ಅನುದಾನ
2018-19	452.13

		<table><tr><td>2019-20</td><td>477.53</td></tr><tr><td>ಒಟ್ಟು</td><td>**929.68**</td></tr></table> 2018-19 ಮತ್ತು 2019-20 ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ. ಮುಕ್ತ ನಿಧಿ, ಎಸ್.ಎಫ್.ಸಿ. ಕುಡಿಯುವ ನೀರು ಹಾಗೂ ಎಸ್.ಎಫ್.ಸಿ. ವಿಶೇಷ ಅನುದಾನದಡಿ ಹಂಚಿಕೆ ಮಾಡಿ ಅನುದಾನ ಬಿಡುಗಡೆ ಮಾಡಿರುವ ವಿವರಗಳನ್ನು **ಅನುಬಂಧ-06** ರಲ್ಲಿ ಒದಗಿಸಿದೆ.
೩.	ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ? (ವಿವರ ನೀಡುವುದು)	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. 1) 14ನೇ ಹಣಕಾಸು ಆಯೋಗದ ಅನುದಾನ 2) 15ನೇ ಹಣಕಾಸು ಆಯೋಗದ ಅನುದಾನ 3) ಅಮೃತ್ ಯೋಜನೆ **<u>14ನೇ ಹಣಕಾಸು ಆಯೋಗದ ಅನುದಾನ:</u> (2015-16 ರಿಂದ 2019-20)** 14ನೇ ಹಣಕಾಸು ಆಯೋಗದ ಅನುದಾನವನ್ನು 3ನೇ ಎಸ್.ಎಫ್.ಸಿ. ಯ ಶಿಫಾರಸ್ಸಿನಂತೆ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗುತ್ತದೆ. ಸದರಿ ಅನುದಾನದಲ್ಲಿ ನಗರದ/ಪಟ್ಟಣದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ನಗರದ ಅವಶ್ಯಕತೆಗನುಗುಣವಾಗಿ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. 1. ಕುಡಿಯುವ ನೀರು ಸರಬರಾಜು 2. ಸಾಮೂಹಿಕ ಮತ್ತು ಸಾರ್ವಜನಿಕ ಶೌಚಾಲಯ ಮತ್ತು ನೈರ್ಮಲ್ಯ 3. ಒಳಚರಂಡಿ ಕಾಮಗಾರಿಗಳು 4. ಮಳೆನೀರು ಚರಂಡಿ 5. ರಸ್ತೆ ಮತ್ತು ಪಾದಚಾರಿಗಳ ಮಾರ್ಗ 6. ಸಾಮೂಹಿಕ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ) 7. ಸ್ಮಶಾನ ಅಭಿವೃದ್ಧಿ 8. ಘನ ತ್ಯಾಜ್ಯ ವಸ್ತು ನಿರ್ವಹಣೆ 9. ಬೀದಿ ದೀಪ ಮತ್ತು ಇಂಧನ ಉಳಿತಾಯ ಕ್ರಮಗಳು ಕಳೆದ 5 ವರ್ಷಗಳಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ಅನುದಾನ ರೂ.3657.85 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. **<u>15ನೇ ಹಣಕಾಸು ಆಯೋಗದ ಅನುದಾನ:</u> (2020-21)** 15ನೇ ಹಣಕಾಸು ಆಯೋಗದ ಅನುದಾನವನ್ನು ನಿರ್ಬಂಧಿತ ಅನುದಾನ ಮತ್ತು ಮುಕ್ತ ಅನುದಾನ (ಮೂಲ ಅನುದಾನ) ವನ್ನಾಗಿ 2 ಭಾಗಗಳಾಗಿ ವಿಂಗಡಿಸಿದ್ದು, ಶೇಕಡಾ 50 ರಷ್ಟು ಅನುದಾನವನ್ನು ಕುಡಿಯುವ ನೀರು ಸರಬರಾಜು ಮತ್ತು

		ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಮಾನವಾಗಿ ಬಳಸಲು ಕಡ್ಡಾಯಗೊಳಿಸಲಾಗಿರುತ್ತದೆ. ಉಳಿದ ಶೇ.50 ರಷ್ಟು ಅನುದಾನ ಮುಕ್ತ (ಮೂಲ) ಅನುದಾನವಾಗಿದ್ದು, ಸದರಿ ಅನುದಾನವನ್ನು ನಗರದ ಅವಶ್ಯಕತೆಗನುಗುಣವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಗರಿಷ್ಟ ಶೇ.20ರಷ್ಟು ಮೀರದಂತೆ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. 1. ಸಾಮೂಹಿಕ ಮತ್ತು ಸಾರ್ವಜನಿಕ ಶೌಚಾಲಯ ಮತ್ತು ನೈರ್ಮಲ್ಯ 2. ಒಳಚರಂಡಿ ಕಾಮಗಾರಿಗಳು 3. ಮಳೆನೀರು ಚರಂಡಿ 4. ರಸ್ತೆ ಮತ್ತು ಪಾದಚಾರಿಗಳ ಮಾರ್ಗ 5. ಸಾಮೂಹಿಕ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ) 6. ಸ್ಮಶಾನ ಅಭಿವೃದ್ಧಿ 7. ಬೀದಿ ದೀಪ ಮತ್ತು ಇಂಧನ ಉಳಿತಾಯ ಕ್ರಮಗಳು. 2020-21ನೇ ಸಾಲಿನಲ್ಲಿ ರಾಜ್ಯ/ನಗರ ಸ್ಥಳೀಯ ಸಂಸ್ಥೆಗಳಿಂದ ಒಟ್ಟು ರೂ.991.00 ಕೋಟಿ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿರುತ್ತದೆ. **3. <u>ಅಮೃತ್ ಯೋಜನೆ:</u>** ಕೇಂದ್ರ ಸರ್ಕಾರವು "ಅಮೃತ್" (ಅಟಲ್ ನಗರ ನವೀಕರಣ ಮತ್ತು ಪುನಶ್ಚೇತನ ಮಿಷನ್) ಯೋಜನೆಯನ್ನು 2015-16ನೇ ಜುಲೈನಲ್ಲಿ ಘೋಷಣೆ ಮಾಡಿದ್ದು, ಸದರಿ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದ ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಬೆಂಗಳೂರು, ತುಮಕೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಶಿವಮೊಗ್ಗ, ವಿಜಯಪುರ, ಮಂಗಳೂರು, ಗುಲ್ಬರ್ಗಾ, ಬಳ್ಳಾರಿ ಮತ್ತು ಮೈಸೂರು ಮಹಾನಗರಪಾಲಿಕೆಗಳು, ಚಿತ್ರದುರ್ಗ, ಭದ್ರಾವತಿ, ಕೋಲಾರ, ರಾಬರ್ಟಸನ್‌ಪೇಟೆ, ಉಡುಪಿ, ಹಾಸನ, ಚಿಕ್ಕಮಗಳೂರು, ಮಂಡ್ಯ, ಬಾಗಲಕೋಟೆ, ಗದಗ-ಬೆಟಗೇರಿ, ರಾಣೆಬೆನ್ನೂರು, ಬೀದರ್, ಗಂಗಾವತಿ, ಹೊಸಪೇಟೆ ಮತ್ತು ರಾಯಚೂರು ನಗರಸಭೆಗಳು ಮತ್ತು ಪಾರಂಪರಿಕ ನಗರವೆಂದು HRIDAY ಯೋಜನೆಯಡಿಯಲ್ಲಿ ವರ್ಗೀಕರಿಸಿದ ಬಾದಾಮಿ ಪಟ್ಟಣ ಸೇರಿ ರಾಜ್ಯದ ಒಟ್ಟು 27 ನಗರ/ಪಟ್ಟಣಗಳನ್ನು ಆಯ್ಕೆ ಮಾಡಲಾಗಿರುತ್ತದೆ. **<u>"ಅಮೃತ್" ಅಭಿಯಾನದಡಿ</u>** ಒಟ್ಟು ಅಭಿಯಾನದ ಅವಧಿಯಾದ 2015-2020 ರವರೆಗೆ, ಒಟ್ಟು ಐದು ವರ್ಷಗಳಿಗೆ ಮಾರ್ಗಸೂಚಿಗಳು ಹಾಗೂ ಕೇಂದ್ರದ ನಿರ್ದೇಶನಗಳನ್ವಯ ರಾಜ್ಯವು ರಾಜ್ಯ ವಾರ್ಷಿಕಾ ಕ್ರಿಯಾ ಯೋಜನೆಯನ್ನು ರೂ.4952.87

ಕೋಟಿಗಳ ಮೊತ್ತಕ್ಕೆ ಸಿದ್ಧಪಡಿಸಿ ರಾಜ್ಯ ಮಟ್ಟದ ಉನ್ನತ ಮಟ್ಟದ ಸಂಚಲನಾ ಸಮಿತಿಯ (SHPSC) ಅನುಮೋದನೆಯ ನಂತರ ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿತ್ತು. ಅದರಂತೆ, "ಅಮೃತ್" ಅಭಿಯಾನದಡಿ ಒಟ್ಟು ಐದು ವರ್ಷಗಳ ಅವಧಿಯ "ಅಮೃತ್" ಅಭಿಯಾನವು ಕರ್ನಾಟಕ ಸರ್ಕಾರದಿಂದ ಒಟ್ಟು ರೂ.4952.87 ಕೋಟಿಗಳ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

ಕೇಂದ್ರದ ಮಾರ್ಗಸೂಚಿಗಳನ್ವಯ "ಅಮೃತ್" ಅಭಿಯಾನದಡಿಯಲ್ಲಿ ಪ್ರಧಾನವಾಗಿ ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯಗಳನ್ನು ಸಾರ್ವತ್ರಿಕ ವ್ಯಾಪ್ತಿಯಲ್ಲಿ (Universal Coverage) ಒದಗಿಸಬೇಕಾಗಿದ್ದು, ಈ ಕೆಳಗಿನ ವಲಯಗಳಲ್ಲಿ ಮಾತ್ರ ಕಾಮಗಾರಿಗಳನ್ನು ಯೋಜಿಸಿ ಹಮ್ಮಿಕೊಳ್ಳಬೇಕಾಗಿರುತ್ತದೆ.

1) ನೀರು ಸರಬರಾಜು.
2) ಒಳಚರಂಡಿ ಮತ್ತು ಸೆಪ್‌ಟೆಜ್ ನಿರ್ವಹಣೆ
3) ಮಳೆ ನೀರು ಚರಂಡಿ.
4) ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ.
5) ನಗರ ಸಾರಿಗೆ.

ಈತನಕ ಕೇಂದ್ರ ಸರ್ಕಾರದ ಅನುದಾನ ರೂ.1885.27 ಕೋಟಿ ಮತ್ತು ರಾಜ್ಯ ಸರ್ಕಾರದ ಅನುದಾನ ರೂ.803.77 ಕೋಟಿ ಬಿಡುಗಡೆಯಾಗಿರುತ್ತದೆ ನಗರ ಸ್ಥಳೀಯ ಸಂಸ್ಥೆಗಳ ವಂತಿಕೆಯಾಗಿ ನಗರಗಳು ಒಟ್ಟು ರೂ.1165.36 ಕೋಟಿಗಳನ್ನು ಬಿಡುಗಡೆಗೊಳಿಸಿರುತ್ತವೆ.

ವಿಜಯಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆ ಮತ್ತು ವಿಜಯಪುರ ಮಹಾನಗರ ಪಾಲಿಕೆಗೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯು ಅನುಮೋದನೆಯಾಗಿರುತ್ತದೆ.

<u>ಸ್ವಚ್ಛ ಭಾರತ ಯೋಜನೆಯಡಿ</u> ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮತ್ತು ವೈಜ್ಞಾನಿಕ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳಾದ ಸಿವಿಲ್ ಮತ್ತು ವಾಹನ ಯಂತ್ರೋಪಕರಣಗಳ ಖರೀದಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು ಸದರಿ ಕಾಮಗಾರಿಗಳ ವಿವರಗಳನ್ನು **ಅನುಬಂಧ-07** ರಲ್ಲಿ ಒದಗಿಸಿದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸರ್ಕಾರವು ಎಸ್.ಎಫ್.ಸಿ ಮುಕ್ತನಿಧಿ, ಎಸ್.ಎಫ್.ಸಿ ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

		ಎಸ್.ಎಫ್.ಸಿ ಮುಕ್ತನಿಧಿ ಅನುದಾನ: ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು 1) ಕುಡಿಯುವ ನೀರು 2) ತರಕಾರಿ ಮಾರುಕಟ್ಟೆ 3)ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ 4)ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ 5)ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು 6)ಸ್ಮಶಾನಅಭಿವೃದ್ಧಿ 7)ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. **ಎಸ್.ಎಫ್.ಸಿ ಕುಡಿಯುವ ನೀರು :** ಎಸ್.ಎಫ್.ಸಿ ಕುಡಿಯವ ನೀರು ಯೋಜನೆಯಡಿ 1)ಕೊಳವೆ ಬಾವಿಗಳನ್ನು ಆಳಗೊಳಿಸುವುದು/ ಸ್ವಚ್ಛಗೊಳಿಸುವುದು 2)ಹೈಡ್ರೋಫ್ಯಾಕ್ಚರಿಂಗ್ 3)ನೀರು ಸರಬರಾಜು ಪೈಪುಗಳ ದುರಸ್ತಿ / ಬದಲಾವಣೆ 4)ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ 5) ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತು ಇತರೆ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. **ಎಸ್.ಎಫ್.ಸಿ ವಿಶೇಷ ಅನುದಾನ:** ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಾನ್ಯ ಮುಖ್ಯ ಮಂತ್ರಿಗಳ ವಿವೇಚನಾನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತದೆ.

ಕಡತ ಸಂಖ್ಯೆ:ನಅಇ 187 ಎಸ್.ಎಫ್.ಸಿ 2021

(ಎನ್. ನಾಗರಾಜ್, ಎಂ.ಟಿ.ಬಿ.)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು